# ಬೆಟ್ಟದ ದರಕು, ಭೂಸತ್ವದ ಸರಕು

ಬೇಸಿಗೆಯಲ್ಲಿ ತೇವಾಂಶ ಕಾಪಿಡುವುದು ಸೇರಿದಂತೆ ಮಳೆಗಾಲದಲ್ಲಿ ಮಣ್ಣಿನ ಸವಕಳಿ ತಡೆಯುವ ಮತ್ತು ತೋಟದಲ್ಲಿನ ಕಳೆ ನಿಯಂತ್ರಣ ಮಾಡುವ ಉಪಯುಕ್ತ ಕಾರ್ಯವನ್ನು ಮಾಡುವ ಸಾಂಪ್ರದಾಯಿಕ ಪದ್ಧತಿಯೇ ಬೆಟ್ಟದ 'ದರಕು' ಹರಡುವುದು. ತೋಟದ ಬೆಳೆಗಳಿಗೆ ಸತ್ವಯುತ ಆಹಾರ ಒದಗಿಸುವ ಸಾಮರ್ಥ್ಯ ಕಾಡಿನ ಒಣ ಎಲೆಗಳಿಗಿದೆ. ಕಡಿಮೆ ಶ್ರಮದಲ್ಲಿ ತೋಟದ ಸತ್ವವನ್ನು ಉಳಿಸಿಕೊಳ್ಳಲು ಪ್ರತಿವರ್ಷವೂ ತೋಟಕ್ಕೆ ದರಕು ಹಾಕಿಸುವುದು ಉಪಯುಕ್ತ ಕ್ರಮ. ದರಕು ಎಂದರೆ ಕಾಡಿನಲ್ಲಿ ಬಿದ್ದ ಒಣಗಿದ ಎಲೆಗಳು. ಇವುಗಳನ್ನು ತಂದು ತೋಟದಲ್ಲಿ ಹರಡಲಾಗುತ್ತದೆ.

ಚಳಿಗಾಲದಲ್ಲಿ ಎಲ್ಲ ಎಲೆಗಳನ್ನೂ ಉದುರಿಸುವುದು ಮಲೆನಾಡಿನ ಸೊಪ್ಪಿನಬೆಟ್ಟದ ಬಹುತೇಕ ಮರಗಳ ಲಕ್ಷಣ. ನೆಲಕ್ಕೆ ಉದುರಿದ ಒಣ ಎಲೆಗಳನ್ನು ಸಂಗ್ರಹಿಸಿ ತಂದು ಅವುಗಳನ್ನು ತೋಟಕ್ಕೆ ಮೇಲು ಹಾಸಾಗಿ ಹರಡುವುದು ಅಥವಾ ಗೊಬ್ಬರ ಗುಂಡಿಗೆ ಹಾಕಿ ಸೆಗಣಿ ದ್ರಾವಣದ ಮಿಶ್ರಣದೊಂದಿಗೆ ಉತ್ತಮ ಸಾವಯವ ಗೊಬ್ಬರ ತಯಾರಿಸುವುದು ಕೃಷಿಕರ ವಾರ್ಷಿಕ ಕಾರ್ಯವಾಗಿದೆ. ಸಾಮಾನ್ಯವಾಗಿ, ಮಾರ್ಚ್‌ನಿಂದ ಆರಂಭವಾಗಿ ಮಳೆಗಾಲದ ಆರಂಭದವರೆಗಿನ ಸುಮಾರು ಮೂರ್‍ನಾಲ್ಕು ತಿಂಗಳು ಮಲೆನಾಡಿನ ಕಾಡು, ಬೆಟ್ಟಗಳಲ್ಲಿ ರೈತರು ತರಗೆಲೆ ಗುಡಿಸಿ ಸಂಗ್ರಹಿಸುವ ದೃಶ್ಯವನ್ನು ಕಾಣಬಹುದು.

ತೋಟಕ್ಕೆ ರಾಸಾಯನಿಕ ಗೊಬ್ಬರ ಬಳಸುವ ರೈತರಿಗಿಂತ, ತರಗೆಲೆಗಳಂತಹ ಸುಲಭದ ಕಚ್ಚಾವಸ್ತುಗಳನ್ನೇ ಹಾಕಿಸಿ ತೋಟದ ಸತ್ವ ಉಳಿಸುವವರೇ ಹೆಚ್ಚಿದ್ದಾರೆ. ಆ ಕಾರಣಕ್ಕೆ ದರಕು ಗುಡಿಸಿ ತರುವ ದೃಶ್ಯಗಳನ್ನು ಉತ್ತರ ಕನ್ನಡದ ಗ್ರಾಮೀಣ ಭಾಗದಲ್ಲಿ ಇಂದಿಗೂ ಕಾಣಬಹುದಾಗಿದೆ.

–ಜಿ.ಎಂ. ಬೊಮ್ನಳ್ಳಿ





# ಹುಲ್ಲಿನಿಂದ ಮಾಡಿದ ಅಕ್ಕಿಮುಡಿ

ಗ್ರಾಮೀಣ ಪ್ರದೇಶದ ರೈತರು ಅಕ್ಕಿ, ಭತ್ತ ಮತ್ತು ಧಾನ್ಯಗಳನ್ನು ಸಂಗ್ರಹಿಸಿಡಲು ಹಿಂದಿನ ಕಾಲದಲ್ಲಿ ಮುಡಿಗಳನ್ನು ತಯಾರಿಸುತ್ತಿದ್ದರು. ಒಣ ಬೈ ಹುಲ್ಲನ್ನು ಬಳಸಿ, ಹಗ್ಗಗಳನ್ನು ನೇಯ್ದು ನುರಿತ ಕುಶಲ ಕರ್ಮಿಗಳು ಈ ಮುಡಿಗಳನ್ನು ತಯಾರಿಸುತ್ತಿದ್ದರು. 30 ಕೆ.ಜಿ., 50 ಕೆ.ಜಿ. ಹೀಗೆ ಅಗತ್ಯ ಮತ್ತು ಅನುಕೂಲಕ್ಕೆ ತಕ್ಕಂತೆ ಮುಡಿಗಳ ಗಾತ್ರ ನಿರ್ಧಾರವಾಗುತ್ತಿತ್ತು. ಈ ಪದ್ಧತಿಯೊಳಗೆ ಪ್ರಕೃತಿಯ ಸಾಮರಸ್ಯ ಅಡಗಿದೆ, ನೈಸರ್ಗಿಕವಾಗಿ ಧಾನ್ಯಗಳನ್ನು ದೀರ್ಘಕಾಲದವರೆಗೆ ಹಾಳಾಗದಂತೆ ಕಾಪಿಡುವ ಗುಣವಿದೆ. ಹಿಂದೆ ತುಳುನಾಡಿನ ಪ್ರತಿ ಕೃಷಿ ಕುಟುಂಬದ ಮನೆಗಳಲ್ಲಿ ಅಕ್ಕಿಮುಡಿಗಳು ಇರುತ್ತಿತ್ತು. ಜನರ ಬದುಕಿನ ಶೈಲಿ ಆಧುನೀಕರಣದತ್ತ ತಿರುಗುತ್ತಿದ್ದಂತೆ ಅಕ್ಕಿ ಮುಡಿಗಳ ಜಾಗವನ್ನು ಗೋಣಿಚೀಲಗಳು ಮತ್ತು ಪ್ಲಾಸ್ಟಿಕ್ ಗೋಣಿಚೀಲಗಳು ಆಕ್ರಮಿಸಿಕೊಂಡಿವೆ. ಈ ಅಕ್ಕಿಮುಡಿಗಳನ್ನು ಕಟ್ಟಿದವರು ಉಜಿರೆ ಸಮೀಪದ ಕಲ್ಮಂಜದ ಡೊಂಬಯ್ಯ ಲಿಂಗಾಯತರು.

–ರಾಜೇಂದ್ರ ಕುಮಾರ್ ಜೈನ್, ಬೈಲಂಗಡಿ

# ಬೆಳ್ಳುಳ್ಳಿ ಬಳ್ಳಿ

ಹಾನಗಲ್ ತಾಲ್ಲೂಕಿನ ಪುಟ್ಟ ಗ್ರಾಮ ಚಿಕ್ಕಾಂಶಿ ಹೊಸೂರಿನಲ್ಲಿರುವ ನಮ್ಮ ಬಂಧುಗಳ ಆಮಂತ್ರಣದ ಮೇರೆಗೆ ಅಲ್ಲಿಗೆ ಹೋಗಿದ್ದೆ. ಅವರ ಮನೆಯ ಕಾಂಪೌಂಡ್ ಬೇಲಿಯ ಮೇಲೆ ವಿಶಾಲವಾಗಿ ಹಬ್ಬಿದ ಹಸಿರೆಲೆ ಬಳ್ಳಿಯ ನಡುವೆ ಅರಳಿದ ಹೂವಿನ ಗೊಂಚಲು ನೋಡಿ ಆಕರ್ಷಿತಳಾದೆ. 'ಇದೆಂಥಾ ಹೂವುಗಳು ಮಾಮಿ' ಎಂದು ಪ್ರಶ್ನಿಸಿದೆ. ಅದಕ್ಕವರು, 'ಮನೆ ಮುಂದಿನ ಕಾಂಪೌಂಡ್ ಮೇಲಿರುವುದು ಅಲ್ವಾ? ಅದು ಬೆಳ್ಳುಳ್ಳಿ ಬಳ್ಳಿ' ಎಂದರು. ಅವರ ಉತ್ತರ ಕೇಳಿ ನನ್ನ ಮೊಮ್ಮಗಳು, 'ಬೆಂಗಳೂರಿನಲ್ಲಿ ಆನ್‌ಲೈನ್ ಮೂಲಕ ಬರುವ ಬೆಳ್ಳುಳ್ಳಿಯಷ್ಟೇ ಗೊತ್ತಿತ್ತು. ಬೆಳ್ಳುಳ್ಳಿ ಬಳ್ಳಿ ನೋಡಿ ಖುಷಿ ಆಯ್ತು' ಎನ್ನುತ್ತಾ, ಬಳ್ಳಿಯಲ್ಲಿ ಒಂದೂ ಬೆಳ್ಳುಳ್ಳಿ ಕಾಣಿಸದ ಬಗ್ಗೆ ಪ್ರಶ್ನಿಸಿದಳು.



ಆ ಬಳ್ಳಿಯ ಎಲೆ, ಹೂವನ್ನು ಕಿತ್ತು, ಕೈಯಲ್ಲಿ ಉಜ್ಜಿ ಮೂಗಿನ ಬಳಿ ತಂದು 'ಬೆಳ್ಳುಳ್ಳಿಯಂತಹ ಪರಿಮಳವನ್ನು ಬೀರುವುದರಿಂದ ಇದಕ್ಕೆ ಬೆಳ್ಳುಳ್ಳಿ ಬಳ್ಳಿ ಎಂದು ಕರೆಯುತ್ತಾರೆ. ಆನ್‌ಲೈನ್‌ನಲ್ಲಿ ತರಿಸುವ ಬೆಳ್ಳುಳ್ಳಿ ಇದರಲ್ಲಿ ಸಿಗುವುದಿಲ್ಲ. ಅದು ಭೂಮಿಯಲ್ಲೇ ಬೆಳೆಯಲಾಗುತ್ತದೆ' ಎಂದು ವಿವರಿಸಿದರು. ಆಗ ಮಗುವಿಗೆ ವಾಸ್ತವ ಅರಿವಾಯಿತು. ಅಂದಹಾಗೆ ಈ ಬಳ್ಳಿಯ ವೈಜ್ಞಾನಿಕ ಹೆಸರು ಮನ್ಸೋವಾ ಅಲಿಯಾಸಿಯಾ (**Mansoa alliacea**), ಬೆಳ್ಳುಳ್ಳಿ ವೈನ್ ಎಂದೂ ಕರೆಯಲಾಗುತ್ತದೆ. ಸಸ್ಯವು ತಿಳಿ ನೇರಳೆ, ಕಹಳೆ ಆಕಾರದ ಹೂವುಗಳು ಕ್ರಮೇಣ ಬಿಳಿ ಬಣ್ಣಕ್ಕೆ ತಿರುಗುತ್ತವೆ. ಬೇಲಿಗಳು, ಉದ್ಯಾನ ಗೋಡೆಗಳನ್ನು ಮುಚ್ಚಲು ಈ ಬಳ್ಳಿಯನ್ನು ಹೆಚ್ಚಾಗಿ ಬೆಳೆಸಲಾಗುತ್ತದೆ.



–ಅನುರಾಧ ಟಿ., ದಾವಣಗೆರೆ